ಕೈಗೆತ್ತಿಕೊಳ್ಳಬಹುದು.

ಅಧ್ಯಕ್ಷರು: ಆಗಬಹುದು. ಇನ್ನು ಶ್ರೀ ಉಮೇಶ್ ವಿಶ್ವನಾಥ್ ಕತ್ತಿ ಅವರ 2969ನೇ ಪ್ರಶ್ನೆಗೆ ಸರ್ಕಾರದಿಂದ ಸಮಯವನ್ನು ಕೇಳಿದ್ದಾರೆ. ಇನ್ನು ಶ್ರೀಮತಿ ಅನುಸೂಯಮ್ಮ ನಟರಾಜನ್ ತಾವು ಪ್ರಶ್ನೆಯನ್ನು ಕೇಳಿ.

ಚಿಕ್ಕಬಳ್ಳಾಪುರ ತಾಲ್ಲೂಕು ರಂಗಧಾಮ ಫೀಡರ್ ಚಾನಲ್ ನಿರ್ಮಾಣಕ್ಕೆ ಮಂಜೂರಾದ ಹಣ.

292(3037)

ಶ್ರೀಮತಿ ಅನುಸೂಯಮ್ಮ ನಟರಾಜನ್(ಚಿಕ್ಕಬಳ್ಳಾಪುರ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ತಾಲ್ಲೂಕು ರಂಗಧಾಮ ಫೀಡರ್ ಚಾನಲ್ ನಿರ್ಮಾಣಕ್ಕೆ 2000-2001ನೇ ಸಾಲಿಗೆ ಮಂಜೂರಾಗಿರುವ ಆಯವ್ಯಯವೆಷ್ಟು ಹಾಗೂ ಈ ಕೆಲಸ ಎಂದು ಪೂರ್ಣಗೊಳ್ಳುತ್ತದೆ.

ಆ) ಚಿಕ್ಕಬಳ್ಳಾಪುರ ತಾಲ್ಲೂಕಿಗೆ ಕೆರೆ ಹೂಳೆತ್ತುವ ಕಾರ್ಯಕ್ಕೆ ಎಷ್ಟು ಹಣ ನಿಗದಿಪಡಿಸಲಾಗಿದೆ ಮತ್ತು ಯಾವ ಯಾವ ಕೆರೆಗಳಿಗೆ ಎಷ್ಟೆಷ್ಟು?

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಕೋಲಾರ ಜಿಲ್ಲೆ, ಚಿಕ್ಕಬಳ್ಳಾಪುರ ತಾಲ್ಲೂಕಿನ ರಂಗಧಾಮ ಫೀಡರ್ ಚಾನಲ್ ನಿರ್ಮಾಣ ಕಾಮಗಾರಿಗೆ 2000-2001ನೇ ಸಾಲಿಗೆ 4.00 ಲಕ್ಷ ರೂ.ಗಳ ಅನುದಾನವನ್ನು ಪ್ರಸ್ತಾಪಿಸಲಾಗಿರುತ್ತದೆ. ಈ ಕಾಮಗಾರಿಯು ಮುಗಿಯುವ ಹಂತದಲ್ಲಿದ್ದು, ಜೂನ್ 2000ರ ಅಂತ್ಯಕ್ಕೆ ಪೂರ್ಣಗೊಳ್ಳುತ್ತದೆ.

ಆ) 1999-2000ನೇ ಸಾಲಿನ ಆಯವ್ಯಯದಲ್ಲಿ ಕೋಲಾರ ಜಿಲ್ಲೆ ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಹೂಳೆತ್ತುವ ಕಾರ್ಯಕ್ಕೆ ಒಟ್ಟು 6.25 ಲಕ್ಷ ರೂ.ಗಳ ಅನುದಾನವನ್ನು ಒದಗಿಸಲಾಗಿದ್ದು, 2 ಕಾಮಗಾರಿಗಳು ಸೇರಿರುತ್ತವೆ.

1. ದೊಡ್ಡ ಮರಳಿ ಕೆರೆ ರೂ.13.00 ಲಕ್ಷ ಅಂದಾಜು ಮೊತ್ತ ಮತ್ತು ರೂ.4.50 ಲಕ್ಷ ಅನುದಾನ.

2. ಮರಸನಹಳ್ಳಿ ಮಾವು ಅಮಾನಿಕೆರೆ ರೂ.5.00 ಲಕ್ಷ ಅಂದಾಜು ಮೊತ್ತ

ಮತ್ತು ರೂ. 1.75 ಲಕ್ಷ ಅನುದಾನವಿರುತ್ತದೆ.

ಪ್ರಸ್ತುತ 2000-2001ನೇ ಸಾಲಿನ ಆಯವ್ಯಯದಲ್ಲಿ ಅನುದಾನಕ್ಕನುಗುಣವಾಗಿ ಹೂಳೆತ್ತುವ ಕಾಮಗಾರಿಗಳನ್ನು ಗುರುತಿಸಿ ಕೈಗೆತ್ತಿಕೊಳ್ಳಲಾಗುವುದು.

ಶ್ರೀಮತಿ ಕೆ.ಪಿ.ಅನುಸೂಯಮ್ಮ ನಟರಾಜನ್: ಮಾನ್ಯ ಅಧ್ಯಕ್ಷರೆ, ಮೊದಲ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಸರಿಯಾದ ಕ್ರಮವನ್ನು ತೆಗೆದುಕೊಂಡಿದ್ದಾರೆ. ಇನ್ನು ಎರಡನೇ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಎಂಟು ಕೆರೆಗಳ ಹೂಳನ್ನು ತೆಗೆಯಬೇಕೆಂದು ಡಿಸೆಂಬರ್ ತಿಂಗಳಲ್ಲಿ ಅರ್ಜಿಯನ್ನು ಕೊಡಲಾಗಿತ್ತು. ಆದರೆ ಎರಡು ಕೆರೆಗಳನ್ನು ಮಾತ್ರ ಹೂಳೆತ್ತುವ ಸಲುವಾಗಿ ತೆಗೆದುಕೊಂಡಿದ್ದಾರೆ. ಆದ್ದರಿಂದ ತಾವು ಕುಪ್ಪಳ್ಳಿ, ಮಂಡೆಕಲ್ಲು ಕೆರೆಗಳನ್ನು ಈಗಾಗಲೇ ತೆಗೆದುಕೊಂಡಿರುವ ಕೆರೆಗಳ ಜೊತೆಗೆ ಹೂಳೆತ್ತುವುದಕ್ಕೆ ತೆಗೆದುಕೊಂಡರೆ ದೊಡ್ಡ ಮರಳಿ ಕೆರೆ, ಮರಸನಹಳ್ಳಿ ಮಾವು ಅಮಾನಿಕೆರೆ ಹೀಗೆ ನಾಲ್ಕು ಕೆರೆಗಳು ಉತ್ತರ ದಕ್ಷಿಣ ಪೂರ್ವ ಪಶ್ಚಿಮ ದಿಕ್ಕುಗಳ ಕಡೆಗೆ ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ 8 ಕೆರೆಗಳಲ್ಲಿ ಮೇಲೆ ಹೇಳಿದ 4 ಕೆರೆಗಳನ್ನಾದರೂ ಹೂಳೆತ್ತುವ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಕುಮಾರ ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ಈ ವರ್ಷ ಹೂಳೆತ್ತುವ ಸಮಗ್ರವಾದ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಹಣದ ಲಭ್ಯತೆ ಮೇಲೆ ಆ ಕಾರ್ಯಕ್ರಮವನ್ನು ತೆಗದುಕೊಳ್ಳುತ್ತೇನೆ.

ಶ್ರೀಮತಿ ಕೆ.ಪಿ.ಅನುಸೂಯಮ್ಮ ನಟರಾಜನ್:ಮಾನ್ಯ ಅಧ್ಯಕ್ಷರೆ, ನೀರಿಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಈಗಾಗಲೇ ಆದ್ಯತೆ ಕೊಟ್ಟಿದ್ದಾರೆ. ಅದರಲ್ಲೂ ನಾವು ಮಹಿಳೆಯರು. ಸಾರ್ವಜನಿರು ಈಗಾಗಲೇ ಕೇಳುತ್ತಿದ್ದಾರೆ. ನೀರಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟು ಈ ನಾಲ್ಕು ಕೆರೆಗಳ ಹೂಳೆತ್ತುವ ಕೆಲಸವನ್ನು ಮಾಡಿಸಿಕೊಡಬೇಕೆಂದು ನಾನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಕುಮಾರ ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ಆಗಲಿ, ಅದನ್ನು ಪರಿಶೀಲಿಸಿ ಮಾಡಿಕೊಡುತ್ತೇವೆ.

ಅಧ್ಯಕ್ಷರು: ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ 3013ನೇ ಪ್ರಶ್ನೆಗೆ ಸರ್ಕಾರದಿಂದ ಒಂದು ವಾರ ಸಮಯ ಕೇಳಿದ್ದಾರೆ. ಮುಂದಿನ ಮಂಗಳವಾರ ಈ ಪ್ರಶ್ನೆಗೆ ಉತ್ತರವನ್ನು ಕೊಡಲಾಗುವುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆ ಕೇಳುವುದಕ್ಕೆ ರೆಡಿಯಾಗಿದ್ದೇನೆ. ಸರ್ಕಾರ ಬೇರೆ ಬೇರೆ ಸಂದರ್ಭದಲ್ಲಿ ಕೊಟ್ಟ ದಾಖಲೆಗಳು ಇವೆ.